# Sixth Semester B.Com. Degree Examination, September/October 2021

*(CBCS Scheme)*

## Commerce

## Paper 6.3 – INCOME TAX – II

*Time : 3 Hours]* *[Max. Marks : 70*

*Instructions to Candidates : Answer should be written either in English or Kannada completely.*

SECTION – A/ವಿಭಾಗ – ಎ

Answer any **FIVE** of the following sub-questions. Each sub-question carries **2** marks : **(5 × 2 = 10)**

ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದಕ್ಕೂ **2** ಅಂಕಗಳು :

1. (a) What do you mean by Business?

   ವ್ಯಾಪಾರ ಎಂದರೇನು?

   (b) What is cash system of book-keeping?

   ನಗದು ವ್ಯವಸ್ಥೆಯ ಪುಸ್ತಕ ನಿರ್ವಹಣೆ ಎಂದರೇನು?

   (c) Give the meaning of casual income.

   ಸಾಂದರ್ಭಿಕ ಆದಾಯದ ಅರ್ಥವನ್ನು ನೀಡಿ.

   (d) What is short-term capital gain?

   ಅಲ್ಪಾವಧಿ ಬಂಡವಾಳ ಗಳಿಕೆ ಎಂದರೇನು?

   (e) State meaning of tax-free commercial securities.

   ತೆರಿಗೆ ರಹಿತ ವಾಣಿಜ್ಯ ಭದ್ರತೆಗಳ ಅರ್ಥವನ್ನು ಹೇಳಿ.

   (f) Mention the rules for carry forward of speculation business loss.

   ವ್ಯಾಪಾರ ನಷ್ಟವನ್ನು ಮುಂದುವರೆಸುವ ನಿಯಮಗಳನ್ನು ತಿಳಿಸಿ.

   (g) Mention the income-tax exemption limit for an individual of more than 60 years.

   60 ವರ್ಷ ದಾಟಿದ ವ್ಯಕ್ತಿಯ ಆದಾಯ ತೆರಿಗೆ ವಿನಾಯಿತಿಯ ಮಿತಿಯನ್ನು ತಿಳಿಸಿ.

SECTION – B/ವಿಭಾಗ – ಬಿ

Answer any **THREE** questions. Each question carries **6** marks : **(3 × 6 = 18)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಸರಿಯಾದ ಉತ್ತರಕ್ಕೆ **6** ಅಂಕಗಳು :

2. State the provisions and exemptions U/S 54B.

   ವಿಭಾಗ 54Bರ ಅಡಿಯಲ್ಲಿನ ನಿಬಂಧನೆಗಳು ಮತ್ತು ವಿನಾಯಿತಿಗಳನ್ನು ಹೇಳಿ.

3. Name any 6 admissible and 6 inadmissible expenses under the head income from business.

   ವ್ಯಾಪಾರದಿಂದ ಬಂದ ಆದಾಯದ ಅಡಿಯಲ್ಲಿ ಬರುವ ಯಾವುದಾದರೂ 6 ಪರಿಗಣಿಸಬಹುದಾದ ಹಾಗೂ 6 ಪರಿಗಣಿಸಲಾಗದ ಖರ್ಚುಗಳನ್ನು ಹೆಸರಿಸಿ.

4. Mr. Kishore furnished the following particulars of his income for the previous year 2019–20. Compute his income from other sources for the Assessment year 2020–21.

   Interest on securities (Net) Rs. 8,980

   Winnings from lottery (Net) Rs. 17,800

   Gift of Rs. 1,00,000 from his uncle on the occasion of his birthday.

   Dividend from a foreign company Rs. 20,000

   Salary received as a manager from agricultural based company Rs. 1,20,000.

   2019–20ನೇ ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಶ್ರೀಯುತ ಕಿಶೋರ್‌ರವರು ಈ ಕೆಳಕಂಡ ಆದಾಯ ವಿವರಗಳನ್ನು ನೀಡಿದ್ದಾರೆ. 2020–21ನೇ ಕರವರ್ಷಕ್ಕೆ ಈತನ ಇತರೆ ಮೂಲಗಳಿಂದ ಬಂದ ಆದಾಯವನ್ನು ಕಂಡು ಹಿಡಿಯಿರಿ :

   ಭದ್ರತೆಗಳ ಮೇಲಿನ ಬಡ್ಡಿ (ನಿವ್ವಳ) ರೂ. 8,980ಗಳು

   ಲಾಟರಿಯಿಂದ ಗೆದ್ದ ಹಣ (ನಿವ್ವಳ) ರೂ. 17,800

   ಹುಟ್ಟುಹಬ್ಬದ ಸಂದರ್ಭದಲ್ಲಿ ಚಿಕ್ಕಪ್ಪನಿಂದ ಪಡೆದ ಕೊಡುಗೆ ರೂ. 1,00,000

   ವಿದೇಶಿ ಕಂಪನಿಯಿಂದ ಬಂದ ಲಾಭಾಂಶ ರೂ. 20,000

   ವ್ಯವಸಾಯ ಆಧಾರಿತ ಕಂಪನಿಯಲ್ಲಿ ನಿರ್ವಾಹಕನಾಗಿ ಕೆಲಸ ನಿರ್ವಹಿಸುವುದರಿಂದ ಬಂದ ಸಂಬಳ ರೂ. 1,20,000

5. Mr. Kushal sold his house on 1-10-2019 for Rs. 10,00,000 and incurred an expenses of Rs. 10,000 on its transfer. This house was inherited by him during 2000–01 from his father, who had constructed it in 1995-96 for Rs. 60,000 Mr. Kushal spent Rs. 1,00,000 on its renovation in the year 2008-09. Fair market value of the house as on 1-4-2001 was Rs. 4,60,000. Compute his capital gain for the Assessment Year 2020–21. (CII for the year 2000–01 = 100, 2008–09 = 137 and 2019–20 = 289)

ಶ್ರೀ ಕುಶಾಲನು 1-10-2019 ರಂದು ತನ್ನ ಮನೆಯನ್ನು ರೂ. 10,00,000ಗಳಿಗೆ ಮಾರಾಟ ಮಾಡಿದನು, ಮತ್ತು ಈ ಮಾರಾಟದಲ್ಲಿ ಈತನಿಗೆ ರೂ. 10,000 ಖರ್ಚು ತಗುಲಿತು. ಈ ಮನೆಯು ಈತನಿಗೆ 2000–01ರಲ್ಲಿ ತನ್ನ ತಂದೆಯಿಂದ ವರ್ಗಾವಣೆಯಾಗಿತ್ತು, ಈ ಮನೆಯು ಈತನ ತಂದೆಯು 1995-96ರಲ್ಲಿ ರೂ. 60,000ಗಳಿಗೆ ಕಟ್ಟಿಸಿದ್ದನು. ಶ್ರೀಯುತ ಕುಶಾಲನು 2008-09ರಲ್ಲಿ ಈ ಮನೆಯನ್ನು ನವೀಕರಿಸಲು ರೂ. 1,00,000ಗಳನ್ನು ಖರ್ಚು ಮಾಡಿದನು, 1-4-2001ರಲ್ಲಿ ಈ ಮನೆಯ ನ್ಯಾಯೋಚಿತ ಬೆಲೆಯು ರೂ. 4,60,000ಗಳು ಆಗಿತ್ತು. 2020-21ನೇ ಕರ ವರ್ಷಕ್ಕೆ ಈತನ ಬಂಡವಾಳ ಗಳಿಕೆಯನ್ನು ಕಂಡು ಹಿಡಿಯಿರಿ.

(ಹಣದುಬ್ಬರ ಸೂಚ್ಯಂಕ 2000–01 = 100, 2008–09 = 137 ಮತು 2019–20 = 289)

6. A block of assets consists of 5 machines. The WDV of the machinery as on 1-4-2019 is Rs. 1,80,000 rate of depreciation is 15%. A new machine costing Rs. 1,60,000 was acquired in May 2019 but, actually put to use only on 10-10-2019. Two old machines are also sold for Rs. 3,20,000 in December 2019. Determine amount of depreciation for the Assessment year 2020–21.

ಒಂದು ಆಸ್ತಿಗಳ ಬ್ಲಾಕ್‌ನಲ್ಲಿ 5 ಯಂತ್ರಗಳಿವೆ. 1-4-2019ರಂದು ಯಂತ್ರೋಪಕರಣಗಳ ಬರೆದಿಡಲಾದ ಮೌಲ್ಯವು ರೂ. 1,80,000 ಆಗಿರುತ್ತದೆ. ಸವಕಳಿಯ ದರ ಶೇ.15. ಮೇ 2019ರಲ್ಲಿ ರೂ. 1,60,000 ಬೆಲೆಯ ಒಂದು ಹೊಸ ಯಂತ್ರವನ್ನು ಕೊಳ್ಳಲಾಯಿತು. ಆದರೆ ಅದನ್ನು 10-10-2019ರಿಂದ ಉಪಯೋಗಿಸಲಾಯಿತು. ಡಿಸೆಂಬರ್ 2019ರಲ್ಲಿ ಎರಡು ಹಳೆಯ ಯಂತ್ರಗಳನ್ನು ರೂ. 3,20,000ಗಳಿಗೆ ಮಾರಾಟ ಮಾಡಲಾಯಿತು.

2020–21ನೇ ಕರವರ್ಷಕ್ಕೆ ಆಗುವ ಸವಕಳಿಯ ಮೊತ್ತವನ್ನು ನಿರ್ಧರಿಸಿ.

## SECTION – C / ವಿಭಾಗ – ಸಿ

Answer any **THREE** of the following questions. Each question carries **14** marks : **(3 × 14 = 42)**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ **14** ಅಂಕಗಳು :

7. Following is the Trading and Profit & Loss A/c of M/S Lakshmi traders for the year ended 31-03-2019.

| | Rs. | | Rs. |
|---|---|---|---|
| To Opening stock | 1,24,000 | By Sales | 33,30,000 |
| To Purchases | 7,28,000 | By Closing stock | 1,36,000 |
| To Carriage | 78,800 | | |
| To Wages | 52,000 | | |
| To Manufacturing expenses | 63,000 | | |
| To Gross profit C/D | 24,20,200 | | |
| | 34,66,000 | | 34,66,000 |

| Dr. | Rs. | Cr. | Rs. |
|---|---|---|---|
| To Salaries | 2,28,000 | By Gross profit b/d | 24,20,200 |
| To Interest on capital | 1,72,000 | By Rent from house Property | 44,000 |
| To Drawings | 1,10,000 | | |
| To Rent & Rates | 1,54,000 | By Dividend from TATA Ltd. | 10,600 |
| To Donation | 25,000 | | |
| To Repairs | 61,000 | By Bad debts recovered | 15,000 |
| To Depreciation | 73,000 | By Interest on Debentures | 18,000 |
| To General expenses | 24,000 | By Miscellaneous income | 8,000 |
| To Legal charges | 6,000 | By Gifts from relatives | 70,400 |
| To IT appeal expenses | 10,000 | | |
| To Audit fees | 5,000 | | |
| To Life Insurance Premium | 46,900 | | |
| To Fire insurance | 23,300 | | |
| To Son's college fees | 30,000 | | |
| To Travelling expenses | 18,000 | | |
| To Net profit | 16,00,000 | | |
| | 25,86,200 | | 25,86,200 |

Additional information :

(a) Stocks are valued 10% below the cost.

(b) Depreciation allowable as per IT rules Rs. 54,000

(c) Legal charges are in connection with the purchase of land.

(d) Repairs include Rs. 6,000 related to house property.

(e) Salaries include Rs. 4,600 paid to a domestic servant.

(f) 40% of bad debts recovered were disallowed earlier.

Compute Taxable business income for the Assessment year 2020–21.

31-03-2019ನೇ ವರ್ಷಾಂತ್ಯಕ್ಕೆ Mrs. ಲಕ್ಷ್ಮಿ ಟ್ರೇಡರ್ಸ್‌ನ ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆ ಈ ಕೆಳಕಂಡಂತಿದೆ :

| | ರೂ. | | ರೂ. |
|---|---|---|---|
| ಗೆ ಪ್ರಾರಂಭಿಕ ಸರಕು | 1,24,000 | ಯಿಂದ ಮಾರಾಟಗಳು | 33,30,000 |
| ಗೆ ಖರೀದಿಗಳು | 7,28,000 | ಯಿಂದ ಅಂತಿಮ ಸರಕು | 1,36,000 |
| ಗೆ ಸಾಗಣೆ | 78,800 | | |
| ಗೆ ಕೂಲಿ | 52,000 | | |
| ಗೆ ತಯಾರಿಕಾ ಖರ್ಚುಗಳು | 63,000 | | |
| ಸ್ಥೂಲ ಲಾಭ | 24,20,200 | | |
| | 34,66,000 | | 34,66,000 |
| ಗೆ ಸಂಬಳಗಳು | 2,28,000 | ಯಿಂದ ಸ್ಥೂಲ ಲಾಭ | 24,20,200 |
| ಗೆ ಬಂಡವಾಳದ ಮೇಲಿನ ಬಡ್ಡಿ | 1,72,000 | | |
| ಗೆ ಹಿಂತೆಗೆತ | 1,10,000 | ಯಿಂದ ಮನೆ ಆಸ್ತಿಯಿಂದ ಬಂದ | |
| ಗೆ ಬಾಡಿಗೆ ಮತ್ತು ದರಗಳು | 1,54,000 | ಬಾಡಿಗೆ | 44,000 |
| ಗೆ ದೇಣಿಗೆ | 25,000 | ಯಿಂದ ಟಾಟಾ ಲಿಮಿಟೆಡ್ ನಿಂದ | |
| ಗೆ ರಿಪೇರಿಗಳು | 61,000 | ಬಂದ ಲಾಭಾಂಶ | 10,600 |
| ಗೆ ಸವಕಳಿ | 73,000 | ಕರಡು ಸಾಲ ವಸೂಲಿ | 15,000 |
| ಗೆ ಸಾಮಾನ್ಯ ಖರ್ಚುಗಳು | 24,000 | ಯಿಂದ ಸಾಲಪತ್ರಗಳ ಮೇಲಿನ ಬಡ್ಡಿ | 18,000 |
| ಗೆ ಕಾನೂನು ಶುಲ್ಕಗಳು | 6,000 | ಯಿಂದ ಇನ್ನಿತರೆ ಆದಾಯ | 8,000 |
| ಗೆ ಆದಾಯ ತೆರಿಗೆ | | ಯಿಂದ ಸಂಬಂಧಿಕರಿಂದ ಬಂದ | |
| ಮನವಿ ಖರ್ಚುಗಳು | 10,000 | ಕೊಡುಗೆಗಳು | 70,400 |
| ಗೆ ಲೆಕ್ಕ ಪರಿಶೋಧನಾ ಶುಲ್ಕು | 5,000 | | |
| ಜೀವ ವಿಮಾ ವಂತಿಗೆ | 46,900 | | |
| ಗೆ ಬೆಂಕಿ ವಿಮೆ | 23,300 | | |
| ಗೆ ಮಗನ ಕಾಲೇಜು ಶುಲ್ಕ | 30,000 | | |
| ಗೆ ಪ್ರಯಾಣ ಖರ್ಚುಗಳು | 18,000 | | |
| ಗೆ ನಿವ್ವಳ ಲಾಭ | 16,00,000 | | |
| | 25,86,200 | | 25,86,200 |

ಹೆಚ್ಚುವರಿ ಮಾಹಿತಿ :

(a) ಸರಕುಗಳು 10% ಕಡಿಮೆ ಬೆಲೆಗೆ ಮೌಲ್ಯವಾಗಿವೆ.

(b) ಆದಾಯ ತೆರಿಗೆ ನಿಯಮಾನುಸಾರ ನೀಡಬಹುದಾದ ಸವಕಳಿ ರೂ. 54,000ಗಳು.

(c) ಕಾನೂನು ಖರ್ಚುಗಳು ಭೂಮಿ ಖರೀದಿಗೆ ಸಂಬಂಧಿಸಿದ್ದಾಗಿದೆ

(d) ರೂ. 6,000 ಗಳಷ್ಟು ರಿಪೇರಿಗಳು ಮನೆ ಆಸ್ತಿಗೆ ಸಂಬಂಧಿಸಿದ್ದಾಗಿವೆ.

(e) ರೂ. 4,600ಗಳಷ್ಟು ಸಂಬಳ ಮನೆ ಕೆಲಸದವರಿಗೆ ನೀಡಿದ್ದಾಗಿದೆ.

(f) ವಸೂಲಾದ ಕರಡು ಸಾಲದಲ್ಲಿ 40% ಪರಿಗಣಿಸಲಾಗಿರಲಿಲ್ಲ.

2020–21ನೇ ಕರ ವರ್ಷಕ್ಕೆ ತೆರಿಗೆಗೊಳಪಡುವ ವ್ಯಾಪಾರ ಆದಾಯವನ್ನು ಕಂಡು ಹಿಡಿಯಿರಿ.

8. Following is the Receipts and Payments A/c of Dr. Harish for the year ending 31-03-2019.

| Receipts | Rs. | Payments | Rs. |
|---|---|---|---|
| To Balance b/d | 1,20,000 | By Clinic rent | 25,000 |
| To Consultation fees | 65,000 | By Salary | 80,000 |
| To Visiting fees | 80,000 | By Rent and rates | 25,000 |
| To Sale of medicine | 45,000 | By Electricity and water charges | 14,000 |
| To Operation theater rent | 25,000 | By Purchase of surgical equipment | 40,000 |
| To Dividend | 25,000 | By Purchase of Medical | 10,000 |
| | | Medical books (Annual publications) | 14,000 |
| | | By Motor car expenses | 10,000 |
| | | By Medical association membership fees | 5,000 |
| | | By Audit fees | 20,000 |
| | | By Staff welfare expenses | 12,000 |
| | | By Diwali expenses | 6,000 |
| | | By Entertainment expenses | 12,000 |
| | | By Purchase of medicine | 30,000 |
| | | By balance c/d | 67,000 |
| | 3,60,000 | | 3,60,000 |

Additional information :

(a) Gift from patient Rs. 4,000 was given to him not included in the account.

(b) 1/4 of the car expenses relates to personal use.

(c) The rate of depreciation on surgical equipment is 40%.

(d) Audit fee include income tax appeal expenses of Rs. 10,000.

Compute his taxable income from profession for the Assessment year 2020–21.

31-03-2019ನೇ ವರ್ಷಾಂತ್ಯಕ್ಕೆ ಡಾ. ಹರೀಶ್‌ರವರ ಸ್ವೀಕೃತಿ ಮತ್ತು ಪಾವತಿ ಖಾತೆ ಈ ಕೆಳಕಂಡಂತಿದೆ :

| ಸ್ವೀಕೃತಿಗಳು | ರೂ. | ಪಾವತಿಗಳು | ರೂ. |
|---|---|---|---|
| ಗೆ ಪ್ರಾರಂಭಿಕ ಶಿಲ್ಕು | 1,20,000 | ಯಿಂದ ಕ್ಲಿನಿಕ್‌ನ ಬಾಡಿಗೆ | 25,000 |
| ಗೆ ಸಮಾಲೋಚನೆ ಶುಲ್ಕು | 65,000 | ಯಿಂದ ಸಂಬಳ | 80,000 |
| ಗೆ ಸಂದರ್ಶನಾ ಶುಲ್ಕು | 80,000 | ಯಿಂದ ಬಾಡಿಗೆ ಮತ್ತು ದರಗಳು | 25,000 |
| ಗೆ ಔಷಧಿಗಳ ಮಾರಾಯ | 45,000 | ಯಿಂದ ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕಗಳು | 14,000 |
| ಗೆ ಆಪರೇಷನ್ ಮಂದಿರದ ಬಾಡಿಗೆ | 25,000 | | |
| ಗೆ ಲಾಭಾಂಶ | 25,000 | ಯಿಂದ ಸರ್ಜಿಕಲ್ ಸಲಕರಣೆಗಳ ಖರೀದಿ | 40,000 |
| | | ಯಿಂದ ವೈದ್ಯಕೀಯ ಪುಸ್ತಕಗಳ ಖರೀದಿ (ವಾರ್ಷಿಕ ಪ್ರಕಟಣೆಗಳು) | 14,000 |
| | | ಯಿಂದ ಮೋಟಾರು ಕಾರಿನ ಖರ್ಚುಗಳು | 10,000 |
| | | ಯಿಂದ ವೈದ್ಯಕೀಯ ಸಂಘದ ಸದಸ್ಯರ ಶುಲ್ಕ | 5,000 |
| | | ಯಿಂದ ಲೆಕ್ಕ ಪರಿಶೋಧನಾ ಶುಲ್ಕ | 20,000 |
| | | ಯಿಂದ ಸಿಬ್ಬಂದಿ ಕಲ್ಯಾಣ ಖರ್ಚುಗಳು | 12,000 |
| | | ಯಿಂದ ದೀಪಾವಳಿ ಖರ್ಚುಗಳು | 6,000 |
| | | ಯಿಂದ ಮನರಂಜನಾ ಖರ್ಚುಗಳು | 12,000 |
| | | ಯಿಂದ ಔಷಧಿ ಖರೀದಿ | 30,000 |
| | | ಯಿಂದ ಅಂತಿಮ ಶಿಲ್ಕು | 67,000 |
| | 3,60,000 | | 3,60,000 |

ಹೆಚ್ಚುವರಿ ಮಾಹಿತಿ :

(a) ರೋಗಿಗಳಿಂದ ಬಂದ ಕೊಡುಗೆ ರೂ. 4,000ಗಳು ಮೇಲಿನ ಖಾತೆಯಲ್ಲಿ ಸೇರಿರುವುದಿಲ್ಲ.

(b) ಕಾರಿನ ಖರ್ಚುಗಳ 1/4 ಭಾಗದಷ್ಟು ಸ್ವಂತ ಉಪಯೋಗದ್ದಾಗಿದೆ

(c) ಸರ್ಜಿಕಲ್ ಸಲಕರಣೆಗಳ ಮೇಲಿನ ಸವಕಳಿ 40%.

(d) ಲೆಕ್ಕ ಪರಿಶೋಧನಾ ಶುಲ್ಕದಲ್ಲಿ ರೂ. 10,000ಗಳು ಆದಾಯ ತೆರಿಗೆ ಮನವಿಗೆ ಸಂಬಂಧಿಸಿದ್ದಾಗಿದೆ.

2020–21ನೇ ಕರವರ್ಷಕ್ಕೆ ಈತನ ತೆರಿಗೆಗೊಳಪಡುವ ವೃತ್ತಿ ಆದಾಯವನ್ನು ಕಂಡು ಹಿಡಿಯಿರಿ.

9. Mr. Chetan sold the following assets.

(a) Agriculture land situated in Mysore was sold for Rs. 3,50,000. It was purchased in 2008–09 for Rs. 1,50,000.

(b) Personal car sold for Rs. 40,000 purchased in 2010–11 for Rs. 2,10,000. WDV of it as on 1-4-2019 Rs. 30,000.

(c) Jewellery sold for Rs. 29,00,000 was purchased on 15-10-1982 for Rs.1,20,000 and its FMV as on 1-4-2001 was Rs. 9,50,000.

(d) Office furniture sold for Rs. 5,000, purchased in December 2003 for Rs. 20,000 and WDV as on 1-4-2019 Rs. 6,000.

(e) Listed debentures sold for Rs. 50,000, was purchased on 15-10-2006 for Rs. 45,000.

(f) Shop located near Mangalore sold for Rs. 8,00,000 was purchased for Rs. 6,50,000 in November 2014.

The assessee purchased a new residential house for Rs. 10,00,000. Compute the total taxable amount of capital gains for the Assessment year 2020–21.

(CII for 2001–02 = 100, 2008–09 = 137, 2019–20 = 289)

ಶ್ರೀಯುತ ಚೇತನ್‌ರವರು ಕೆಳಕಂಡ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ :

(a) ಮೈಸೂರಿನಲ್ಲಿರುವ ಕೃಷಿ ಭೂಮಿಯನ್ನು ರೂ. 3,50,000ಗಳಿಗೆ ಮಾರಾಟ ಮಾಡಲಾಯಿತು. ಇದನ್ನು 2008–09ರಲ್ಲಿ ರೂ.1,50,000ಗಳಿಗೆ ಖರೀದಿಸಲಾಗಿತ್ತು.

(b) ಸ್ವಂತ ಕಾರನ್ನು ರೂ. 40,000ಗಳಿಗೆ ಮಾರಾಟ ಮಾಡಲಾಯಿತು. ಇದನ್ನು 2010–11ರಲ್ಲಿ ರೂ. 2,10,000ಗಳಿಗೆ ಖರೀದಿಸಲಾಗಿತ್ತು. ಇದರ ಬರೆದಿಡಲಾದ ಮೌಲ್ಯ 1-4-2019ರಂದು ರೂ. 30,000 ಆಗಿರುತ್ತದೆ.

(c) 15-10-1982ರಲ್ಲಿ ರೂ. 1,20,000ಕ್ಕೆ ಖರೀದಿಸಲಾದ ಆಭರಣಗಳನ್ನು ರೂ. 29,00,000ಗಳಿಗೆ ಮಾರಾಟ ಮಾಡಲಾಯಿತು. 1-4-2001ರಂದು ಇದರ ನ್ಯಾಯೋಚಿತ ಬೆಲೆಯು ರೂ. 9,50,000. ಆಗಿರುತ್ತದೆ.

(d) ಡಿಸೆಂಬರ್ 2003ರಲ್ಲಿ ರೂ. 20,000ಗಳಿಗೆ ಖರೀದಿಸಲಾದ ಕಛೇರಿ ಪೀಠೋಪಕರಣಗಳನ್ನು ರೂ. 5,000ಗಳಿಗೆ ಮಾರಾಟ ಮಾಡಲಾಯಿತು. ಇದರ ಬರೆದಿಡಲಾದ ಮೌಲ್ಯ ದಿನಾಂಕ 1-4-2019ರಂದು ರೂ. 6,000 ಆಗಿರುತ್ತದೆ.

(e) 15-10-2006ರಲ್ಲಿ ರೂ. 45,000ಗಳಿಗೆ ಖರೀದಿಸಿದ ಪಟ್ಟೀಕರಿಸಿದ ಸಾಲಪತ್ರಗಳನ್ನು ರೂ. 50,000ಗಳಿಗೆ ಮಾರಾಟ ಮಾಡಲಾಯಿತು.

(f) ನವೆಂಬರ್ 2014ರಲ್ಲಿ ರೂ. 6,50,000ಗಳಿಗೆ ಖರೀದಿಸಿದ ಮಂಗಳೂರಿನ ಬಳಿಯಿರುವ ಅಂಗಡಿಯನ್ನು ರೂ. 8,00,000ಗಳಿಗೆ ಮಾರಾಟ ಮಾಡಲಾಯಿತು.

ತೆರಿಗೆದಾರನು ಹೊಸ ವಾಸದ ಮನೆಯನ್ನು ರೂ. 10,00,000ಗಳಿಗೆ ಖರೀದಿಸಿನು. 2020–21ನೇ ಕರವರ್ಷಕ್ಕೆ ತೆರಿಗೆಗೊಳಪಡುವ ಬಂಡವಾಳ ಗಳಿಕೆಯನ್ನು ಕಂಡು ಹಿಡಿಯಿರಿ.

(CII for 2001–02 = 100, 2008–09 = 137, 2019–20 = 289)

10. Dr. Dinesh is a professor of Economics; he submits the following details and wants you to compute his taxable income from other sources.

(a) He is an author of text book and received a royalty of Rs. 45,000. He claims the following deduction from this amount : salary to clerk for gathering information for him to write the book Rs. 5,000, cost of books purchased Rs. 1,000 for reference work in order to write this book. Telephone expenses of Rs. 800 in connection with printing and publication of the book.

(b) Income from articles published in "Economic times" Rs. 7,000.

(c) He lives in rented house paying a rent of Rs. 4,000 p.m. he has sub-let half portion of the house for a rent Rs. 3,000 pm. Dr. Dinesh pays the municipal tax of the whole house Rs. 4,000.

(d) He received Rs. 200 per lecture delivered at the Economics Institute during the year, He delivered 22 such lectures.

(e) As an examiner of various universities he received remuneration of Rs. 5,000.

(f) His other incomes were : winnings from lottery Rs. 21,000 (Net), interest on Government of England bonds Rs. 3,000.

(g) Interest on post office cumulative time deposit Rs. 1,000.

(h) Interest received on the deposit from a firm Rs. 5,400.

ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ.ದಿನೇಶ್‌ರವರು ಈ ಕೆಳಕಂಡ ವಿವರಗಳನ್ನು ಸಲ್ಲಿಸಿದ್ದು, ನಿಮ್ಮನ್ನು ತನ್ನ ತೆರಿಗೆಗೊಳಪಡುವ ಇತರೆ ಮೂಲಗಳಿಂದ ಬರುವ ಆದಾಯವನ್ನು ಕಂಡು ಹಿಡಿಯಲು ಕೋರಿದ್ದಾರೆ :

(a) ಈತನು ಪುಸತಕದ ಲೇಖಕನಾಗಿದ್ದು ರೂ. 45,000 ರಾಜಧನವನ್ನು ಪಡೆದಿದ್ದು, ಈ ಮೊತ್ತದಿಂದ ಕೆಳಕಂಡ ಕಡಿತಗಳನ್ನು ಮಂಡಿಸಿದ್ದಾನೆ :

ಪುಸ್ತಕ ಬರೆಯಲು ದತ್ತಾಂಶವನ್ನು ಶೇಖರಿಸಿದ ಗುಮಾಸ್ತನಿಗೆ ಸಂಬಳ ರೂ. 5,000, ಈ ಪುಸ್ತಕವನ್ನು ಬರೆಯಲು ಪರಾಮರ್ಶನ ಪುಸ್ತಕಗಳ ಖರೀದಿ ರೂ. 1,000ಗಳು. ದೂರವಾಣಿ ಖರ್ಚುಗಳು ರೂ. 800ಗಳು. ಈ ಪುಸ್ತಕ ಮುದ್ರಣ ಮತ್ತು ಪ್ರಕಾಶನಕ್ಕೆ ಆಗಿದೆ.

(b) 'ಎಕನಾಮಿಕ್ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಲೇಖನಗಳಿಂದ ಬಂದ ಆದಾಯ ರೂ. 7,000.ಗಳು.

(c) ಈತನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಆ ಮನೆಗೆ ಮಾಸಿಕ ರೂ. 4,000ಗಳ ಬಾಡಿಗೆಯನ್ನು ನೀಡುತ್ತಿದ್ದು, ಈಗ ಆ ಮನೆಯ ಅರ್ಧ ಭಾಗವನ್ನು ರೂ. 3,000 ಮಾಸಿಕ ಉಪಬಾಡಿಗೆಗೆ ನೀಡಿದ್ದಾನೆ, ಈ ಮನೆಯ ಪೂರ್ತಿ ಮುನ್ಸಿಪಲ್ಟಿ ತೆರಿಗೆಯಾದ ರೂ. 4,000ಗಳನ್ನು ಡಾ. ದಿನೇಶ್‌ರವರು ಪಾವತಿಸಿದ್ದಾರೆ.

(d) ಈತನು ವಿವಿಧ ಅರ್ಥಶಾಸ್ತ್ರ ಸಂಸ್ಥೆಗಳಲ್ಲಿ ಉಪನ್ಯಾಸಗಳನ್ನು ನೀಡಿ ಒಂದು ಉಪನ್ಯಾಸಕ್ಕೆ ರೂ. 200ಗಳಂತೆ ಸ್ವೀಕರಿಸುತ್ತಾನೆ. ಈ ವರ್ಷದಲ್ಲಿ ಅಂತಹ 22 ಉಪನ್ಯಾಸಗಳನ್ನು ನೀಡಿದ್ದಾನೆ.

(e) ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಕನಾಗಿ ಕೆಲಸ ಮಾಡಿ ರೂ. 5,000ಗಳ ಸಂಭಾವನೆಯನ್ನು ಪಡೆದಿದ್ದಾನೆ.

(f) ಈತನ ಇತರೆ ಆದಾಯಗಳೆಂದರೆ; ಲಾಯರಿಯಲ್ಲಿ ಗೆದ್ದ ಹಣ ರೂ. 21,000 (ನಿವ್ವಳ), ಇಂಗ್ಲೆಂಡ್ ಸರ್ಕಾರಿ ಬಾಂಡ್‌ಗಳ ಮೇಲಿನ ಬಡ್ಡಿ ರೂ. 3,000.

(g) ಅಂಚೆ ಕಛೇರಿಯ ಸಂಚಿತ ಸಮಯ ಠೇವಣಿಗಳ ಮೇಲಿನ ಬಡ್ಡಿ ರೂ. 1,000ಗಳು.

(h) ಪಾಲುದಾರ ವ್ಯವಹಾರದಲ್ಲಿ ಇರಿಸಿದ ಠೇಣಿಯಿಂದ ಬಂದ ಬಡ್ಡಿ ರೂ. 5,400.

11. Mrs. Shravani, an entrepreneur gives the following particulars of her income for the financial year 2019–20. You are required to compute the taxable income and tax liability for the Assessment year 2020-21.

(a) Business income Rs. 8,46,000

(b) Income from house property (computed) Rs. 42,000

(c) Interest on Government securities Rs. 60,000

(d) Long term capital gains Rs. 36,000

(e) Winning from crossword puzzles Rs. 21,000

She has paid life insurance premium amounting to Rs. 15,000. She has also deposited in Bank fixed deposit for a term of 3 years Rs. 10,000.

ಶ್ರೀಮತಿ ಶ್ರಾವಣಿ ಎಂಬ ಉದ್ದಿಮೆದಾರರು 2019–20ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ತನ್ನ ಆದಾಯದ ವಿವರಗಳನ್ನು ಈ ಕೆಳಕಂಡಂತೆ ನೀಡಿದ್ದಾರೆ. 2020-21ನೇ ಕರವರ್ಷಕ್ಕೆ ಆಕೆಯ ತೆರಿಗೆಗೊಳಪಡುವ ಆದಾಯ ಮತ್ತು ತೆರಿಗೆ ಜವಾಬ್ದಾರಿಯನ್ನು ಕಂಡು ಹಿಡಿಯಿರಿ.

(a) ವ್ಯಾಪಾರದ ಆದಾಯ ರೂ. 8,46,000

(b) ಮನೆ ಆಸ್ತಿಯಿಂದ ಬಂದ ಆದಾಯ (ಕಂಡು ಹಿಡಿದುದು) ರೂ. 42,000

(c) ಸರ್ಕಾರದ ಭದ್ರತೆಗಳ ಮೇಲಿನ ಬಡ್ಡಿ ರೂ. 60,000

(d) ದೀರ್ಘಾವಧಿ ಬಂಡವಾಳ ಗಳಿಕೆ ರೂ. 36,000

(e) ಪದಬಂದ ಸಮಸ್ಯೆಗಳನ್ನು ಬಿಡಿಸುವುದರಿಂದ ಗೆದ್ದ ಹಣ ರೂ. 21,000

ಈ ವರ್ಷದಲ್ಲಿ ಆಕೆಯು ರೂ. 15,000ಗಳಷ್ಟು ಜೀವ ವಿಮಾ ವಂತಿಗೆಯನ್ನು ಪಾತಿಸಿದ್ದಾರೆ ಮತ್ತು ಬ್ಯಾಂಕಿನ 3 ವರ್ಷದ ಅವಧಿಯ ಸ್ಥಿರ ಠೇವಣಿಯಲ್ಲಿ ರೂ. 10,000ಗಳನ್ನು ಇರಿಸಿದ್ದಾರೆ.